# ಪ್ರಕೃತಿಮಾತೆ ಮಡಿಲಲ್ಲಿ ಸ್ವರಸಾಕಾರ

**‘ಡಿವೈನ್ ಟೈಡ್ಸ್’ ಆಡಿಯೊ–ವಿಡಿಯೊ ದೃಶ್ಯಕಾವ್ಯಕ್ಕೀಗ ‘ಗ್ರ್ಯಾಮಿ’ ಗರಿ. ಸ್ವರ ಸಂಯೋಜಕರಾದ ರಿಕ್ಕಿ ಕೇಜ್ ಹಾಗೂ ಅಮೆರಿಕದ ಡ್ರಮ್ಸ್ ದಿಗ್ಗಜ ಸ್ಟುವರ್ಟ್ ಕೋಪ್‌ಲ್ಯಾಂಡ್ ಇಬ್ಬರೂ ನಾದದಲೆಗಳನ್ನು ಪ್ರಕೃತಿಯ ಲಯಕ್ಕೊಗ್ಗಿಸಿರುವ ಪರಿ ವಿಶಿಷ್ಟವಾಗಿದೆ.**

■ **ವಿಶಾಖ ಎನ್.**

ಮರಿಹಕ್ಕಿಗೆ ಗುಟುಕು ಕೊಟ್ಟ ಅದರ ಅಪ್ಪನ ರೆಕ್ಕೆ ಫಡಫಡಿಸುವಾಗ ತೇಲುವ ಮೋಡಗಳಿಗೂ ಪುಲಕ. ಹಸಿರು ಹೊದ್ದ ವನಸಿರಿಯ ಮಧ್ಯದಲ್ಲಿ ವಾದ್ಯಗಳನ್ನು ಹಿಡಿದು ಆಲಾಪ ಮಾಡುತ್ತಾ, ತಮ್ಮದೇ ಲೋಕದಲ್ಲಿ ಕಳೆದುಹೋದ ಮಾಧುರ್ಯಮೋಹಿಗಳ ಸೇರಿಕೊಳ್ಳುವ ವರ್ಷಧಾರೆ. ಹಿಮಾಲಯದ ತಪ್ಪಲಿನ ಟಿಬೇಟಿಯನ್ ಕೇಂದ್ರದಲ್ಲಿನ ಬುದ್ಧಮೂರ್ತಿಯ ಅರೆ ನಿಮೀಲಿತ ಕಣ್ಣುಗಳಲ್ಲಿನ ಬೆಳಕು. ತಾದಾತ್ಮ್ಯದಲ್ಲಿ ದೇವರ ಮೂರ್ತಿ ಮಾಡುವ ಭಕುತನ ಸಣ್ಣಪುಟ್ಟ ಕದಲಿಕೆಗಳು. ತಪ್ಪಲ ನಡುವಿನಂಗಳದಲ್ಲಿ ಪುಟ್ಟ ಬಾಲಕಿಯ ಗಾಳದಂಥ ನಗು. ನಿಸರ್ಗದ ಮಡಿಲಲ್ಲಿ ಪೂರ್ಣ ಬೆತ್ತಲಾಗಿ ತಾನೇ ಪ್ರಕೃತಿಮಾತೆಯಾಗಿ ಚೆಲ್ಲವರಳಿದ ತಾಯಿಜೀವ.

‘ಗ್ರ್ಯಾಮಿ’ ಪ್ರಶಸ್ತಿಗೆ ಭಾಜನವಾದ ‘ಡಿವೈನ್ ಟೈಡ್ಸ್’ ಆಡಿಯೊ–ವಿಡಿಯೊ ಕಟ್ಟಿಕೊಡುವ ದೃಶ್ಯಕಾವ್ಯದ ಕೆಲವು ಝಲಕ್‌ಗಳಿವು. ಸ್ವರ ಸಂಯೋಜಕರಾದ ರಿಕ್ಕಿ ಕೇಜ್ ಹಾಗೂ ಅಮೆರಿಕದ ಡ್ರಮ್ಸ್ ದಿಗ್ಗಜ ಸ್ಟುವರ್ಟ್ ಕೋಪ್‌ಲ್ಯಾಂಡ್ ಇಬ್ಬರೂ ನಾದದಲೆಗಳನ್ನು ಪ್ರಕೃತಿಯ ಲಯಕ್ಕೊಗ್ಗಿಸಿರುವ ಪರಿ ಕಾಡುತ್ತದೆ. ಒಂದೊಂದು ಸಲದ ಆಸ್ವಾದನೆಗೂ ಬೇರೆಬೇರೆಯಾಗಿಯೇ ಪ್ರತಿ ವಿಡಿಯೊ ದಕ್ಕುತ್ತದೆ. ಸ್ವರ ಪ್ರಸ್ತಾರ, ಹಲವು ವಾದ್ಯಗಳು ಉಂಟುಮಾಡುವ ಕರ್ಣಾನಂದಕ್ಕೆ ಪ್ರಕೃತಿಸಹಜವಾದ, ಮನುಷ್ಯಜನ್ಯವೂ ಆದ ಶಬ್ದಗಳನ್ನು ಬೆಸೆದ ಸಂಗೀತವಿದು. ದೃಶ್ಯ ಹಾಗೂ ಸಂಗೀತ ಒಂದನ್ನೊಂದು ಮುದ್ದಿಸುವ ಬಗೆ. ನಿಸರ್ಗವೇ ಸಂಗೀತದ ಮೂಲಧಾತು. ಅದರ ಮಡಿಲಿಗೇ ಸ್ವರಗಳನ್ನು ಇಟ್ಟು ಸುಖಿಸುವ ಧ್ಯಾನಸ್ಥ ಮನಃಸ್ಥಿತಿಯಲ್ಲಿ ಈ ‘ಭಕ್ತಿಯ ಅಲೆಗಳು’ ಮೂಡಿವೆ.

‘ಹಿಮಾಲಯಾಸ್’, ‘ಆರ್ಟ್ ಆಫ್ ಡಿವೋಷನ್’, ‘ವಂಡರ್ಸ್ ಆಫ್ ಲೈಫ್’, ‘ಮದರ್ ಅರ್ತ್’, ‘ಗಾಂಧಿ’, ‘ಐ ಆ್ಯಮ್ ಚೇಂಜ್’, ‘ಅವರ್ ಹೋಮ್’, ‘ಪ್ಯಾಸ್ಟೋರಲ್ ಇಂಡಿಯಾ’ – ಇಂತಹ ಶೀರ್ಷಿಕೆಗಳನ್ನು ಭಕ್ತಿಯ ಅಲೆಗಳ ವಿಡಿಯೊಗೆ ಇಟ್ಟಿದ್ದಾರೆ. ಈ ಶೀರ್ಷಿಕೆಗಳೇ ಒಂದೊಂದು ಕಥೆಯನ್ನು ಅರುಹುವಂತಿವೆ. ಭಕ್ತಿ ಎನ್ನುವುದು ಇಲ್ಲಿ ಧಾರ್ಮಿಕ ಪ್ರಜ್ಞೆಗಷ್ಟೆ ಸೀಮಿತವಲ್ಲ. ಅದು ಅಧ್ಯಾತ್ಮದ, ಆತ್ಮಸಾಕ್ಷಾತ್ಕಾರದ ಮಾರ್ಗವೆನ್ನುವಂತೆ ಒದಗಿಬಂದಿರುವುದಕ್ಕೆ ದೃಶ್ಯ ಹಾಗೂ ಸ್ವರಗಳ ಸಮ್ಮಿಳಿತವೇ ಪುಷ್ಟಿ ಕೊಡುತ್ತದೆ.

‘ಹಿಮಾಲಯಾಸ್’ ವಿಡಿಯೊದಲ್ಲಿನ ರಾಗದ ಜತೆಗೆ ಅಲ್ಲಿನ ನಿಸರ್ಗ ಸೌಂದರ್ಯವೂ ಬೆಸೆದುಕೊಂಡಿದೆ. ಪಯಣದ ಝಲಕ್‌ಗಳೂ ಅಲ್ಲಲ್ಲಿ ಇವೆ. ‘ಆರ್ಟ್ ಆಫ್ ಡಿವೋಷನ್’ ಎನ್ನುವುದು ಲೋಹದ ಮೂರ್ತಿ ತಯಾರಕನೊಬ್ಬನ ಅಷ್ಟೂ ಪ್ರಕ್ರಿಯೆಯನ್ನು ಒಳಗೊಳ್ಳುವ ಸೂಕ್ಷ್ಮಾತಿಸೂಕ್ಷ್ಮ ದೃಶ್ಯಗಳನ್ನು ಒಳಗೊಂಡಿದೆ. ‘ವಂಡರ್ಸ್ ಆಫ್ ಲೈಫ್’ನಲ್ಲಿ ಬೇರೆ ಬೇರೆ ಪ್ರದೇಶಗಳ, ಹಲವು ಧರ್ಮಗಳ, ಮುಗ್ಧ ನಗು–ನೋಟವಿರುವ ಮನುಷ್ಯರ ದರ್ಶನವಾಗುತ್ತದೆ. ‘ಮದರ್ ಅರ್ತ್’ನಲ್ಲಿ ಕಾನನದ ನಡುವೆ ಸಂಗೀತ ಹೊಮ್ಮಿಸುತ್ತಾ, ಹಸಿರ ಸೊಬಗನ್ನು ಸವಿಯುತ್ತಲೇ ವರ್ಷಧಾರೆಗೆ ಒಡ್ಡಿಕೊಳ್ಳುವ ರಸಕಾವ್ಯದ ಅನಾವರಣವಿದೆ. ಇದನ್ನು ನೋಡುವಾಗ ನಾವೂ ಕಾಡ ನಡುವಿನ ಮಳೆಯಲ್ಲಿ ತೋಯ್ದು ತೊಪ್ಪೆಯಾದ ಭಾವ ಆವರಿಸಿಕೊಂಡೀತು.

‘ಗಾಂಧಿ’ ಎನ್ನುವ ಶೀರ್ಷಿಕೆಯನ್ನು ಕಪ್ಪೆಗಳ ಸೂಕ್ಷ್ಮ ದೃಶ್ಯವಂತಿಕೆ ತೋರುವ ವಿಡಿಯೊಗೆ ಇಟ್ಟಿರುವುದು ವಿಶೇಷ. ಮಹಾತ್ಮ ಗಾಂಧಿ ಹೆಸರು ಚಿರಂತನ. ಅಂತೆಯೇ ಈ ಕಪ್ಪೆಗಳ



ಗ್ರ್ಯಾಮಿ ಖುಷಿಯಲ್ಲಿ ರಿಕ್ಕಿ ಕೇಜ್ ಹಾಗೂ ಅಮೆರಿಕದ ಸ್ಟುವರ್ಟ್ ಕೋಪ್‌ಲ್ಯಾಂಡ್